ಹಂತ ಹಂತವಾಗಿ ತೆಗೆದುಕೊಳ್ಳುತ್ತಿದೆ. ವೃಷಭಾವತಿ ಕಣಿವೆಗೆ ಹರಿದು ಬರುವ ಪೂರ್ಣ ಕೊಳಚೆ ನೀರನ್ನು ಸಂಸ್ಕರಣೆ ಘಟಕಕ್ಕೆ ಹರಿದು ಬಿಡುವಂತೆ ಮಾಡುವ ಎಲ್ಲಾ ಕೆಲಸಗಳನ್ನು ಹಾಗೂ ಸಂಸ್ಕರಣೆ ಘಟಕವನ್ನು ವಿನ್ಯಾಸಗೊಳಿಸಿದ ಪ್ರಕಾರ ಕಾರ್ಯ ಚಾಲನೆ ಮಾಡಿದರೆ ಈ ಪ್ರದೇಶದಲ್ಲಿರುವ ಈಗಿನ ಪರಿಸರ ಮಾಲಿನ್ಯವನ್ನು ಕಡಿಮೆ ಮಾಡಬಹುದು. ಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆ ನಾಲ್ಕನೆಯ ಹಂತದಲ್ಲಿ ಮೈಸೂರು ರಸ್ತೆಯ ಆರ್.ವಿ. ಇಂಜಿನಿಯರಿಂಗ್ ಕಾಲೇಜ್ ಬಳಿ(ಮೈಲ ಸಂದ್ರ) ಸಹ ಒಂದು 75 ಎಂ.ಎಲ್.ಡಿ. ಸಂಸ್ಕರಣೆ ಘಟಕವನ್ನು ನಿರ್ಮಿಸಲಾಗುವುದು.

ಬೆಂಗಳೂರು ನಗರದಲ್ಲಿ ಬಹುಮಹಡಿ ವಾಹನ ನಿಲುಗಡೆ ಸಮುಚ್ಛಯಗಳು

2829 (3726) ಶ್ರೀ ಪಿ.ಸಿ.ಮೋಹನ್, (ಚಿಕ್ಕಪೇಟೆ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಂಗಳೂರು ಮಹಾನಗರದಲ್ಲಿ ಬಹುಮಹಡಿ ವಾಹನ ನಿಲುಗಡೆ ಸಮುಚ್ಛಯಗಳು ಎಷ್ಟಿವೆ; ಎಲ್ಲೆಲ್ಲಿ ಇವೆ; ಸ್ಥಳ ವಿವರ ನೀಡುವುದು;

ಆ) ಜನಸಂದಣಿಯ ಮುಖ್ಯ ಪ್ರದೇಶಗಳಲ್ಲಿ ಈ ರೀತಿಯ ನಿಲುಗಡೆ ಸಮುಚ್ಛಯ ನಿರ್ಮಿಸಲು ಸರ್ಕಾರ ಚಿಂತಿಸಿದೆಯೆ; ಹೊಸದಾಗಿ ಇದಕ್ಕಾಗಿ ಯಾವ ಯಾವ ಸ್ಥಳಗಳನ್ನು ಗುರುತಿಸಲಾಗಿದೆ;

ಇ) ಹಾಲಿ ಇರುವ ನಿಲುಗಡೆ ಸಮುಚ್ಛಯಗಳ ಸ್ಥಿತಿ-ಗತಿ ಸುಧಾರಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಇದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಅ) ಒಂದು

ಜೆ.ಸಿ. ರಸ್ತೆ ಮತ್ತು ಹೆಚ್.ಸಿದ್ದಯ್ಯ ರಸ್ತೆ ಕೂಡುವ ರಸ್ತೆಯಲ್ಲಿರುತ್ತದೆ.

ಆ) ಹೌದು

ಈ ಕೆಳಕಂಡ ಪ್ರದೇಶಗಳನ್ನು ಸಮುಚ್ಛಯ ನಿರ್ಮಿಸಲು ಗುರುತಿಸಲಾಗಿದೆ

1. ಮರಗತ್ ರಸ್ತೆ

2. ಜಿಲ್ಲಾ ರಾಂ ಆಸ್ಪತ್ರೆ, ಅದರಲ್ಲಿ ಕೆ.ಜಿ.ರಸ್ತೆ

3. ಗಾಂಧೀನಗರ, ಸುಖಸಾಗರ ಎದುರು

4. ಡಿ.ಐ.ಜಿ.ಕಛೇರಿ ಆವರಣ, ಕನ್ನಿಂಗ್‌ಹ್ಯಾಂ ರಸ್ತೆ.

ಇ) ಈ ಬಗ್ಗೆ ವಿವರವಾಗಿ ಪರಿಶೀಲಿಸಿ ಸಮುಚ್ಛಯದ ಅಭಿವೃದ್ಧಿ ಬಗ್ಗೆ ಯೋಜನೆಯನ್ನು ರೂಪಿಸಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸುಚ್ಛಯದ ಸುತ್ತಲು ಚರಂಡಿಗಳನ್ನು ಮಾಡಿ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.